ಬಡ್ಡಿಯನ್ನು ಸಹಕಾರಿ ಕ್ಷೇತ್ರದ ಬ್ಯಾಂಕುಗಳಿಗೆ ಸೇರಿದಂತೆ ಮನ್ನಾ ಮಾಡಿರುತ್ತದೆ. ಈ ಸೌಲಭ್ಯವನ್ನು ರಾಷ್ಟ್ರೀಕೃತ ಬ್ಯಾಂಕುಗಳಿಂದ ಶೆಡ್ಯೂಲ್ಡ್ ಬ್ಯಾಂಕುಗಳಿಂದ ಹಾಗೂ ಗ್ರಾಮೀಣ ಬ್ಯಾಂಕುಗಳಿಂದ ಪಡೆದಿರುವ ರೈತರ ಕೃಷಿ ಸಾಲಕ್ಕೂ ವಿಸ್ತರಿಸಲು ಕೇಂದ್ರ ಸರ್ಕಾರವನ್ನು ಕೋರುವಂತೆ ಈ ಸದನ ನಿರ್ಣಯಿಸುತ್ತದೆ".

(ನಿರ್ಣಯವು ಸರ್ವಾನುಮತದಿಂದ ಅಂಗೀಕೃತಗೊಂಡಿತು)

9. ಗಮನ ಸೆಳೆಯುವ ಸೂಚನೆಗಳು

ಅ) ವಿಷಯ : ಮುಧೋಳ್ ಪಟ್ಟಣದ ಎ.ಪಿ.ಎಂ.ಸಿ.ಯಾರ್ಡ್ ಹತ್ತಿರದ ಪರಿಶಿಷ್ಟ ಜಾತಿ ಮತ್ತು ಲಂಬಾಣಿ ಜನಾಂಗದವರಿಗೆ ಜಮೀನಿನ ಹಕ್ಕು ಪತ್ರ ನೀಡುವ ಕುರಿತು.

ಶ್ರೀ ಗೋವಿಂದ ಎಂ.ಕಾರಜೋಳ (ಮುಧೋಳ್) : ಮಾನ್ಯ ಅಧ್ಯಕ್ಷರೇ, ಮುಧೋಳ್ ಗ್ರಾಮದ ಸರ್ವೇ ನಂ.543 ರಲ್ಲಿ ಕಳೆದ ಸುಮಾರು 30 ವರ್ಷಗಳಿಂದ ಲಂಬಾಣಿ ಜನರು ವಾಸವಾಗಿದ್ದಾರೆ. ಅವರಿಗೆ ಹಕ್ಕು ಪತ್ರಗಳಲ್ಲಿ ಕೊಡಲಿಕ್ಕೆ ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು) : ಮಾನ್ಯ ಅಧ್ಯಕ್ಷರೇ, ಮುಧೋಳ್ ಪಟ್ಟಣದ ಎ.ಪಿ.ಎಂ.ಸಿ. ಹತ್ತಿರದ ರಿ.ಸ.ನಂ.543 ರ ಜಮೀನು ಕಂದಾಯ ಇಲಾಖೆಗೆ ಸೇರುತ್ತದೆ. ಈ ಜಮೀನಿನ ಸುಮಾರು 3.00 ಎಕರೆ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಲಂಬಾಣಿ ಜನಾಂಗದ ಸುಮಾರು 90 ಕುಟುಂಬಗಳು ಕಳೆದ 30–40 ವರ್ಷಗಳಿಂದ ವಾಸಿಸುತ್ತದೆ. ಮುಧೋಳ್ ಪುರಸಭೆ ಈ ಕುಟುಂಬಗಳಿಗೆ ಕುಡಿಯುವ ನೀರು, ಬೀದಿ ದೀಪ, ರಸ್ತೆ ಇತ್ಯಾದಿ, ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿರುತ್ತದೆ. ಕಂದಾಯ ಇಲಾಖೆಗೆ ಸೇರಿದ ಈ ಜಮೀನನ್ನು ಪುರಸಭೆಗೆ ವರ್ಗಾಯಿಸಲು ಮುಧೋಳ್ ಪುರಸಭೆಯು ಈಗಾಗಲೇ ಕಂದಾಯ ಇಲಾಖೆಯನ್ನು ಕೋರುತ್ತದೆ. ಸದರಿ ಪ್ರಕರಣವು ಪ್ರಸ್ತುತ ಕಂದಾಯ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ. ಕಂದಾಯ ಇಲಾಖೆಯಿಂದ ಈ ಜಮೀನನ್ನು ಪುರಸಭೆಗೆ ವರ್ಗಾಯಿಸಿದ ನಂತರ ಮೇಲ್ಕಂಡ ಕುಟುಂಬಗಳಿಗೆ ಹಕ್ಕು ಪತ್ರ ನೀಡಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೇ, ಕಂದಾಯ ಇಲಾಖೆಯಿಂದ ವರ್ಗಾಯಿಸಿದ ನಂತರ ಕೊಡುತ್ತೇವೆ ಎಂಬ ಉತ್ತರವನ್ನು ನೀಡಿದ್ದಾರೆ. ಉತ್ತರ ಸಮರ್ಪಕವಾಗಿಲ್ಲ. ಕಳೆದ 40 ವರ್ಷದಿಂದ ಏನು ಪರಿಶಿಷ್ಟ ಜಾತಿ, ಜನಾಂಗಕ್ಕೆ ಸೇರಿದಂಥ ಲಂಬಾಣಿ ಜನಾಂಗದವರು ಕೂಲಿ ನಾಲಿ ಮಾಡಿ ಹೊಟ್ಟೆ ತುಂಬಿಕೊಳ್ಳುವುದಕ್ಕಾಗಿ ಸರ್ಕಾರದ ಖುಲ್ಲಾ ಜಮೀನಿನಲ್ಲೇನು ಮನೆಗಳನ್ನು, ಗುಡಿಸಲುಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಅವರಿಗೆ ಸುಮಾರು 30 ದಿವಸದೊಳಗೆ ಸರ್ಕಾರ ಹಕ್ಕು ಪತ್ರಗಳನ್ನು ಕೊಡಲು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀಎಸ್.ಆರ್.ಮೋರೆ: ಇದು ಕಂದಾಯ ಇಲಾಖೆಯಲ್ಲಿರುವುದರಿಂದ, ಇಲಾಖೆಯ ಮಂತ್ರಿಗಳು ಪ್ರವಾಸದಲ್ಲಿದ್ದಾರೆ. ಅವರು ಬಂದ ನಂತರ ಅವರ ಜೊತೆ ಮಾತನಾಡಿ ಆದಷ್ಟು ಬೇಗನೆ ಪರಿಹಾರ ಕೊಡಿಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ಗೋವಿಂದ ಎಂ.ಕಾರಜೋಳ : ತೊಂದರೆ ಏನಿದೆಯೆಂದರೆ, ಅಲ್ಲಿ ಕೆಲವರು ಅವರನ್ನು ಒಕ್ಕಲೆಬ್ಬಿಸಲು ಪ್ರಯತ್ನ ಮಾಡುತ್ತಿದ್ದಾರೆ, ಹಣವನ್ನು ಕೇಳುತ್ತಿದ್ದಾರೆ, ಆ ಬಡವರು ತೊಂದರೆಯಲ್ಲಿದ್ದಾರೆ, ಅದಕ್ಕಾಗಿ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತಿದ್ದೇನೆ. 30 ದಿವಸದೊಳಗೆ ಇಲ್ಲವೇ 40 ದಿವಸದೊಳಗೆ ಕೊಡುತ್ತೇವೆಂದು ಒಂದು ಕಮಿಟ್‌ಮೆಂಟ್ ಮಾಡಿ.

ಶ್ರೀ ಎಸ್.ಆರ್.ಮೋರೆ : ಇಲ್ಲ. ಸಚಿವರು ಪ್ರವಾಸದಲ್ಲಿದ್ದಾರೆ, ಅವರು ಬಂದ ನಂತರ ಆದಷ್ಟು ಬೇಗ ಅವರ ಜತೆ ಚರ್ಚೆ ಮಾಡಿಕೊಡುತ್ತೇವೆ.

ಶ್ರೀ ಗೋವಿಂದ ಎಂ.ಕಾರಜೋಳ : ಸರ್ಕಾರದ ಪರವಾಗಿ ಹೇಳಿ ದಯಮಾಡಿ.

ಶ್ರೀ ಗೋವಿಂದ ಎಂ.ಕಾರಜೋಳ : ಕಂದಾಯ ಇಲಾಖೆ ಬೇರೆಯಲ್ಲ, ಕರ್ನಾಟಕ ಸರ್ಕಾರದ ಪರವಾಗಿ ಹೇಳಿ, ಪೌರಾಡಳಿತ ಇಲಾಖೆಯಾಗಿರಬಹುದು, ಕಂದಾಯ ಇಲಾಖೆಯಾಗಿರಬಹುದು, ಎಲ್ಲವೂ ಸರ್ಕಾರದ ಪರವಾಗಿ ತಾವು ಹೇಳಿ.

ಶ್ರೀ ಎಸ್.ಆರ್.ಮೋರೆ : ಆದಷ್ಟು ಬೇಗ ನಾನು ಪರಿಶೀಲನೆ ಮಾಡಿ ನಾನು ಕೊಡಿಸುತ್ತೇನೆ.